# ಬೈಯಿರೋ ಬೈಯಿರೋ ಮನಮುಟ್ಟಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 414.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 177.
3. **Note:** This song is not available in Shri Betageri Krishna Sharma and Shri Bengeri Huchha Rayaru books.
4. **Note:** Lyrics given here are as per Ref. 1. The wordings in Ref. 2 are same as in Ref. 1.
5. **Note:** Singer has followed these lyrics.

ರಾಗ: ಕಾಪಿ ತಾಳ: ಏಕ

ಬೈಯಿರೋ ಬೈಯಿರೋ
ಮನಮುಟ್ಟಿ ಬೈಯಿರೋ ॥ ಪ ॥

ಚೆನ್ನಾಗಿ ಬೈದೆನ್ನ ಧನ್ಯನ ಮಾಡಿರೊ ॥ ಅಪ ॥

ಅವರು ಇವರು ಬೈದರೆಂಬೊ
ಹೀನ ಬುದ್ಧಿ ನನಗಿಲ್ಲ
ನಾ ಮಾಡಿದಷ್ಟು ಪಾಪವನ್ನು
ಅಳೆದು ಹಾಕಿ ಹಂಚಿಕೊಳ್ಳಿರೊ ॥ ೧ ॥

ಇರುವೆ ನೊಣ ಕೊಂದ ಪಾಪ
ಪರನಿಂದ್ಯವ ಮಾಡಿದ ಪಾಪ
ಹೊಲೆಯ ಪಾಪ ಕೆಲವು ಉಂಟು
ಅಳೆದು ಹಾಕಿ ಹಂಚಿಕೊಳ್ಳಿರೊ ॥ ೨ ॥

ಅತ್ತೆ ಮಾವನ ಬೈದ ಪಾಪ
ಮತ್ತೆ ಹಿರಿಯರ ಜರಿದ ಪಾಪ

ಕರ್ತ ಶ್ರೀ ಪುರಂದರ ವಿಠಲನ್ನ
ಚಿತ್ತದಲ್ಲಿ ನೆನೆಯದ ಪಾಪ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಮಾಡಿದ ಕೆಟ್ಟ ಕೆಲಸದ ಕಾವು ಅವನನ್ನು ಕಂಡು ಬಯ್ಯುವವರಿಂದ ಕಡಮೆಯಾಗುತ್ತದೆ; ಒಬ್ಬ ಮಾಡಿದ ಪಾಪ ಬೇರೆಯವರು ಮಾಡುವ ನಿಂದನೆಯಿಂದ ಪರಿಹಾರವಾಗುವುದೆಂದೂ, ಅದು ನಿಂದಕರಿಗೆ ಒದಗುವುದೆಂದೂ ಅಗ್ನಿ ಪುರಾಣದ ಮಾತಿದೆ. 'ಮಾಡಿದವರ ಪಾಪ ಆಡಿದವರಿಗೆ' ಎಂಬ ಕನ್ನಡ ಗಾದೆಗೆ ಇದೇ ಮೂಲ. ಹಾಗೆಯೇ ದಾನ ಧರ್ಮಾದಿಗಳನ್ನು ಮಾಡಿದಾಗ, ಬೇರೆಯವರು ಹೊಗಳಿದರೆ ಮಾಡಿದವರಿಂದ ಪುಣ್ಯವೂ ಹೊರಟು ಹೋಗುತ್ತದೆ; ಹೊಗಳಿದವರಿಗೆ ಸಲ್ಲುತ್ತದೆ; ಅದಕ್ಕಾಗಿಯೇ ಪುಣ್ಯದ ಕೆಲಸವನ್ನು ಗುಟ್ಟಾಗಿ ಮಾಡಬೇಕೆನ್ನುವುದು ಮತ್ತು ಕೆಟ್ಟವರಿದ್ದು ಕಷ್ಟವನ್ನು ಕೊಡುತ್ತಿದ್ದರೆ, ಅವನ್ನು ತಾಳಿಕೊಳ್ಳುವುದು ತಪಸ್ಸೆನಿಸುತ್ತದೆ; ಸಾಧನೆಯೇ ಆಗಿ ಮಾರ್ಪಡುತ್ತದೆ. ಇದಕ್ಕೆ ಅವಕಾಶ ಮಾಡಿಕೊಡುವ ಜನ ಇರಲೇಬೇಕು; ಇಲ್ಲವಾದರೆ ಸಾಧನೆ ಕೈಗೂಡುವುದಿಲ್ಲ.

**Classification:** Keerthane
**Ankita:** sri purandara vittala
**Location:** NA
**Category:** swabhava vishleshane, jeevanoddhara, uggaDaNe
**Sub-Category:** bayyi, papa, punya, mana, dhanya, buddi, iruve, noNa, holeya, atte, chitta,
**Pravachana:** NA
**Explanation:** NA